# ಮಧುಮಾಲತಿ ಬಳ್ಳಿ!

■ ಚಿತ್ರ ಬರಹ:
ಡಾ.ಎಂ.ವಸುಂಧರ



ಸಂಜೆಯ ಸುತ್ತಾಟ ಮುಗಿಸಿ ಬರುವಾಗ ಎಲ್ಲಿಂದಲೋ ಸುಗಂಧ ತೇಲಿಬಂದ ಅನುಭವ. ಸುತ್ತಮುತ್ತಲೆಲ್ಲೂ ಪರಿಚಿತ ಹೂವಿನ ಗಿಡಗಳು ಕಾಣದಿದ್ದಾಗ ಸುವಾಸನೆಯ ದಿಕ್ಕನ್ನು ಹಿಡಿದು ಹೊರಟೆ. ಆಗ ಕಂಡಿದ್ದು ಬಹಳ ಪರಿಚಿತವಾದ ಈ ಬಳ್ಳಿಗಳ ಸಾಲು. ಆದರೆ, ಈ ಬಳ್ಳಿಯಿಂದ ಈ ಪರಿ ಸುವಾಸನೆ ಬರಬಹುದೆಂದು ನಾನೆಣಿಸಿರಲಿಲ್ಲ. ಕೃಷಿ ವಿಶ್ವವಿದ್ಯಾನಿಲಯದ ನಮ್ಮ ವಿಭಾಗದಲ್ಲಿ ಈ ಬಳ್ಳಿಯನ್ನು ನೆಟ್ಟು ಹೂಬಿಡುವ ಗಳಿಗೆಗಾಗಿ ಕಾದಿದ್ದಕ್ಕೆ ನಿರಾಶೆಯಾಗಲಿಲ್ಲ.

ಸಸ್ಯಶಾಸ್ತ್ರೀಯವಾಗಿ ಕ್ವಿಸ್‌ಕ್ವಾಲಿಸ್ ಇಂಡಿಕಾ ಎಂದು ಕರೆಯಲ್ಪಡುವ ಈ ಬಳ್ಳಿ ಕಾಂಬ್ರಿಟೇಸಿ ಕುಟುಂಬಕ್ಕೆ ಸೇರಿದೆ. ಈ ಬಳ್ಳಿಯ ಮೂಲ ಮಲೇಷ್ಯಾ, ಬರ್ಮಾ ಹಾಗೂ ಫಿಲಿಪ್ಪೀನ್ಸ್ ದ್ವೀಪಗಳು. ಸಾಮಾನ್ಯವಾಗಿ ಇಂಗ್ಲಿಷ್‌ನಲ್ಲಿ ರಂಗೂನ್ ಕ್ರೀಪರ್ (ರಂಗೂನ್ ಈಗಿನ ಮ್ಯಾನ್ಮಾರ್) ಮತ್ತು ಬಂಗಾಳಿ ಭಾಷೆಯಲ್ಲಿ ಮಧುಮಾಲತಿ (ಕನ್ನಡದಲ್ಲಿ ಈ ಹೆಸರಿನ ಚಲನಚಿತ್ರವೊಂದು ಬಂದಿದ್ದಂತೆ ನೆನಪು) ಎನ್ನುತ್ತಾರೆ. ಮರಾಠಿಯಲ್ಲಿ ಲಾಲ್ ಚಮೇಲಿ, ತಮಿಳಿನಲ್ಲಿ ಇರಂಗೂನ್ ಮಲ್ಲೈ ಎಂದು ಕರೆಯಲ್ಪಡುತ್ತದೆ– ಈ ಸುವಾಸಿತ ಬಳ್ಳಿ.

ಶೀಘ್ರ ಗತಿಯಲ್ಲಿ ಗಡುಸಾಗಿ ಬೆಳೆಯುವ ಈ ಬಳ್ಳಿಗಳನ್ನು ಎತ್ತರದ ಮರಗಳಿಗೆ ಅಥವಾ ಗಟ್ಟಿಯಾದ ಕಂಬಗಳಿಗೆ ಅಥವಾ ಕಮಾನುಗಳಿಗೆ ಹಬ್ಬಿಸಬೇಕು. ಈ ಬಳ್ಳಿಯಲ್ಲಿ ಬಾಗಿರುವ ಮುಳ್ಳುಗಳು ಇರುವುದರಿಂದ ಸುಲಭವಾಗಿ ಮೇಲಕ್ಕೆ ಹಬ್ಬಿ ಬೆಳೆಯಬಲ್ಲುದು. ಹೂಗಳು ಮೊಟ್ಟಮೊದಲು ಬಿಳುಪಾಗಿದ್ದು ಆನಂತರ ಗುಲಾಬಿ ಬಣ್ಣಕ್ಕೆ ತಿರುಗಿ ನಂತರ ಗಾಢ ಕೆಂಪುಬಣ್ಣಕ್ಕೆ ಬದಲಾಗುತ್ತವೆ.

ಹಾಗಾಗಿ ಬಿಳುಪು ಹಾಗೂ ಗುಲಾಬಿ ಬಣ್ಣದ ಹೂಗಳು ಒಂದೇ ಗೊಂಚಲಲ್ಲಿ ಕಂಡುಬರುತ್ತವೆ. ಎಂತಹ ಮಣ್ಣಿನಲ್ಲಾದರೂ ಬೆಳೆಯಬಲ್ಲ ಬಳ್ಳಿ. ವಿಪರೀತದ ಹವಾಮಾನದಲ್ಲೂ ಸುಲಭವಾಗಿ ಬೆಳೆಯುತ್ತದೆ. ಹೂಗಳು ಬಿಟ್ಟ ತರುವಾಯ ಸವರುವಿಕೆ ಅಗತ್ಯ. ಇಲ್ಲದಿದ್ದಲ್ಲಿ ಕಮಾನು ಕಳಚಿ ಬಿದ್ದೀತು. ಹೂವಿನ ಪುಷ್ಪ ಪಾತ್ರೆ ಉದ್ದವಿದ್ದು ಹೂಗಳು ಐದು ಪಕಳೆಗಳನ್ನು ಹೊಂದಿರುತ್ತವೆ.  ಹೂಗಳ ಗೊಂಚಲು ಬಾಗಿದಂತೆ ಕಂಡುಬರುತ್ತವೆ.

ಬೆಂಗಳೂರಿನಲ್ಲಿ ವರ್ಷವಿಡೀ ಈ ಹೂವುಗಳನ್ನು ಕಾಣಬಹುದು. ಈ ಪ್ರಭೇದದಲ್ಲಿ ಬರೀ ಕೆಂಪನೆಯ ಹೂಗಳ ತಳಿ ಮತ್ತು ಬಿಳುಪಿನ ತಳಿಯ ಗಿಡಗಳು ನರ್ಸರಿಗಳಲ್ಲಿ ದೊರಕುತ್ತವೆ. ಕ್ವಿಸ್‌ಕ್ವಾಲಿಸ್ ಮಲಬಾರಿಕ ಎನ್ನುವುದು ಮತ್ತೊಂದು ಪ್ರಭೇದವಾಗಿದ್ದು ಸಣ್ಣ ಹೂಗಳನ್ನು ಹೊಂದಿದೆ. ಈ ಬಳ್ಳಿಗಳನ್ನು ಸುಲಭವಾಗಿ ಕಾಂಡದ ತುಂಡುಗಳಿಂದ ಹಾಗೂ ಗೂಟಿಯಿಂದಲೂ ವೃದ್ಧಿ ಮಾಡಬಹುದು. ಕೆಲವೊಮ್ಮೆ ತೋಟಗಳಲ್ಲಿ ಬೇರುಗಳಿಂದ ಹೊಸಗಿಡಗಳು ಬೇರೂರಿರುವುದು ಕಂಡುಬರುತ್ತದೆ. ಈ ಗಿಡಗಳನ್ನು ಮಳೆಗಾಲದಲ್ಲಿ ತೆಗೆದು ಪಾಲಿಥೀನ್ ಚೀಲಗಳಲ್ಲಿ ಮಣ್ಣು, ಮರಳು, ಗೊಬ್ಬರದ ಮಿಶ್ರಣವನ್ನು (1:1:1) ತುಂಬಿ ನೆಡುವುದರಿಂದ ಗಿಡಗಳನ್ನು ವೃದ್ಧಿ ಮಾಡಬಹುದು.